ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-6, May – June 2026, Pp. 26-36
©*IIMRD*, Mysuru

IIMRD JOURNALS
www.iimrd.com

# ದಲಿತರ ಮೇಲೆ ನಡೆಯುವ ಸಾಮಾಜಿಕ ದೌರ್ಜನ್ಯಗಳು : ಚಾರಿತ್ರಿಕ ನೋಟ

**ಡಾ.ನರಸಿಂಹರಾಜು ಹೆಚ್.ಸಿ**
ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ದೇವನಹಳ್ಳಿ, ಬೆಂಗಳೂರು.

**ಸಾರಾಂಶ: (Abstract)**

*ಭಾರತೀಯ ಸಮಾಜದಲ್ಲಿ ದಲಿತರು ಶತಮಾನಗಳಿಂದಲೂ ಜಾತಿ ಆಧಾರಿತ ಅಸಮಾನತೆ, ಸಾಮಾಜಿಕ ಬಹಿಷ್ಕಾರ ಮತ್ತು ವಿವಿಧ ರೀತಿಯ ದೌರ್ಜನ್ಯಗಳನ್ನು ಎದುರಿಸುತ್ತಾ ಬಂದಿದ್ದಾರೆ. ಈ ಸಂಶೋಧನಾ ಲೇಖನವು ದಲಿತರ ಮೇಲೆ ನಡೆದ ಸಾಮಾಜಿಕ ದೌರ್ಜನ್ಯಗಳನ್ನು ಚಾರಿತ್ರಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಪ್ರಾಚೀನ ಕಾಲದಿಂದಲೂ ವರ್ಣ–ಜಾತಿ ವ್ಯವಸ್ಥೆಯ ಪರಿಣಾಮವಾಗಿ ದಲಿತರನ್ನು ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಶೈಕ್ಷಣಿಕ ಅವಕಾಶಗಳಿಂದ ದೂರವಿಡಲಾಗಿತ್ತು. ಅಸ್ಪೃಶ್ಯತೆ, ಸಾರ್ವಜನಿಕ ಸ್ಥಳಗಳ ಬಳಕೆಯ ನಿರ್ಬಂಧ, ಶಿಕ್ಷಣ ಮತ್ತು ಉದ್ಯೋಗದಲ್ಲಿ ತಾರತಮ್ಯ, ಬಲವಂತದ ದುಡಿಮೆ ಹಾಗೂ ಮಾನವ ಗೌರವಕ್ಕೆ ಧಕ್ಕೆ ತರುವ ಪದ್ಧತಿಗಳು ದಲಿತರ ಜೀವನದ ಮೇಲೆ ಗಂಭೀರ ಪರಿಣಾಮ ಬೀರಿವೆ. ವಸಾಹತುಶಾಹಿ ಕಾಲದಲ್ಲಿ ದಲಿತ ಸಮುದಾಯಗಳ ಸಮಸ್ಯೆಗಳು ಸಾಮಾಜಿಕ ಚರ್ಚೆಯ ಭಾಗವಾದವು ಮತ್ತು ಜ್ಯೋತಿರಾವ್ ಫುಲೆ, ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಹಲವು ಸಮಾಜ ಸುಧಾರಕರು ಸಮಾನತೆ ಮತ್ತು ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ಸ್ವಾತಂತ್ರ್ಯಾನಂತರ ಭಾರತೀಯ ಸಂವಿಧಾನವು ಅಸ್ಪೃಶ್ಯತೆಯನ್ನು ನಿಷೇಧಿಸಿ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳನ್ನು ಸ್ಥಾಪಿಸಿದರೂ, ಇಂದಿಗೂ ದಲಿತರ ಮೇಲೆ ನಡೆಯುವ ದೌರ್ಜನ್ಯಗಳು ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಈ ಅಧ್ಯಯನವು ದಲಿತರ ಮೇಲಿನ ಐತಿಹಾಸಿಕ ದೌರ್ಜನ್ಯಗಳ ಸ್ವರೂಪ, ಕಾರಣಗಳು ಮತ್ತು ಸಾಮಾಜಿಕ ಪರಿಣಾಮಗಳನ್ನು ಪರಿಶೀಲಿಸುವುದರ ಜೊತೆಗೆ, ಸಾಮಾಜಿಕ ನ್ಯಾಯದ ಸ್ಥಾಪನೆಗೆ ಅಗತ್ಯವಾದ ಕ್ರಮಗಳನ್ನು ಚರ್ಚಿಸುತ್ತದೆ.*

**ಮುಖ್ಯಪದಗಳು (Keywords):** *ದಲಿತರು, ಸಾಮಾಜಿಕ ದೌರ್ಜನ್ಯ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಸಾಮಾಜಿಕ ನ್ಯಾಯ*

## ಪೀಠಿಕೆ

ಸಂವಿಧಾನಬದ್ಧವಾಗಿ ದಲಿತ ಸಮುದಾಯದ ಜನರು ಸಾಮಾಜಿಕವಾದ ನ್ಯಾಯವನ್ನು ಯಾವಾಗ ಕೇಳಲು ಪ್ರಾರಂಭಿಸುತ್ತಾರೋ ಅಂದಿನಿಂದ ಅವರ ಮೇಲೆ ದೌರ್ಜನ್ಯಗಳು ಪ್ರಾರಂಭವಾಗುತ್ತವೆ. ಸಾಮಾಜಿಕ ಹಿನ್ನೆಲೆಯಿಂದ ದೌರ್ಜನ್ಯ ಮಾಡುವವರು ಬ್ರಾಹ್ಮಣೇತರ ಸಮುದಾಯದ ಶೋಷಕ ಜಾತಿಯ ಜನರು.

*Please cite this article as:* ನರಸಿಂಹರಾಜು ಹೆಚ್.ಸಿ. (2026). ದಲಿತರ ಮೇಲೆ ನಡೆಯುವ ಸಾಮಾಜಿಕ ದೌರ್ಜನ್ಯಗಳು : ಚಾರಿತ್ರಿಕ ನೋಟ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(6). ಪು.ಸಂ.* 26–36

ಏಕೆಂದರೆ ಊರು–ಕೇರಿಯ ಪರಿಕಲ್ಪನೆಯೊಳಗೆ ಬರುವ ಕೇರಿಯ ಜನರಿಗೆ ಊರಿನ ಜನರು ವಿಧಿಸಿರುವ ನಿಯಮಗಳಿಂದ ಸಮಸ್ಯೆಯಾಗುತ್ತದೆ. ಎರಡು ಸಮುದಾಯಗಳ ಜನರ ನಡುವೆ ಸಂಘರ್ಷವಾಗಿ ಕೇರಿಯ ಜನರಿಗೆ ಆರ್ಥಿಕವಾಗಿ ತೊಂದರೆಯನ್ನು ನೀಡುವುದು, ಅವರ ಮೇಲೆ ಹಲ್ಲೆಗಳನ್ನು ಮಾಡುವುದು, ಭೀಕರವಾಗಿ ಕೊಲೆಗಳನ್ನು ಮಾಡುವುದು, ಗೌರವವಿಲ್ಲದೆ ಮಾತನಾಡಿಸುವುದು, ಸಾಮಾಜಿಕ ಬಹಿಷ್ಕಾರವನ್ನು ಹಾಕುವುದು ಸಾಮಾಜಿಕ ದೌರ್ಜನ್ಯದೊಳಗೆ ಕಂಡುಬರುತ್ತವೆ. ಊರಿನ ಜನರು ಸಾಮಾಜಿಕ ವ್ಯವಸ್ಥೆಯಲ್ಲಿ ಬಲಾಢ್ಯರು. ಅವರು ಕೇರಿಯ ಜನರನ್ನು ತಮ್ಮ ಸೇವೆಗೆ ಇರಿಸಿಕೊಂಡಿರುತ್ತಾರೆ. ಊರಿನ ಜನರ ಯಾವುದೇ ಕೆಲಸಗಳನ್ನು ಲಾಭಕ್ಕಾಗಿ ಮಾಡದೆ ತಮ್ಮ ಕರ್ತವ್ಯವೆಂದು ಭಾವಿಸಿ ಆ ಕೆಲಸವನ್ನು ಮಾಡುವಂತೆ ಮಾಡುತ್ತಾರೆ. ಆದರೆ ಕೇರಿಯ ಜನರ ಮಾಡಿದ ಯಾವುದೇ ಸೇವೆಗೆ ಮಹತ್ವವನ್ನು ನೀಡದೆ ಅವರೊಂದಿಗೆ ಮೃಗೀಯವಾಗಿ ನಡೆದುಕೊಳ್ಳುತ್ತಾರೆ.

ಭಾರತೀಯರ ಪವಿತ್ರಗ್ರಂಥ ಎಂದೇ ಬಿಂಬಿತವಾಗಿರುವ 'ಸಂವಿಧಾನ'ದ ನ್ಯಾಯಯುತ ಆದೇಶಗಳು ಜಾರಿಯಲ್ಲಿದ್ದರೂ ಸಹ ಸಾವಿರಾರು ವರ್ಷಗಳಿಂದ ಜಾರಿಯಲ್ಲಿದ್ದ ಶೋಷಕ ಸಮುದಾಯದವರ ಅಲಿಖಿತ ಸಂವಿಧಾನ ಗಟ್ಟಿಯಾಗಿ ತಳವೂರಿದ್ದರ ಪರಿಣಾಮವಾಗಿ ಲಿಖಿತಸಂವಿಧಾನ ಜಾರಿಯಾಗಿ 1975ನೇ ಕಾಲಘಟ್ಟಕ್ಕೆ 25 ವರ್ಷಗಳಾಗಿದ್ದರೂ ಜೀತಪದ್ಧತಿ, ಬಲವಂತದ ದುಡಿಮೆ, ಕೂಲಿಕಾರರ ಮಾರಾಟ ಇಂತಹ ಹಲವಾರು ಬಗೆಯ ಪದ್ಧತಿಗಳು ರೂಢಿಯಲ್ಲಿದ್ದವು. 1975ರ ನಂತರ 20 ಅಂಶಗಳ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಭಾಗದ ಜನರಿಗೆ ಗೃಹನಿರ್ಮಾಣ ಯೋಜನೆಯ ಅಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡಲಾಗುತ್ತದೆ. ಸಂವಿಧಾನದ ಆಶಯಕ್ಕೆ ಪೂರಕವಾಗಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕೆಲವೊಂದು ಕಾನೂನು ಕಾಯ್ದೆಗಳನ್ನು ಜಾರಿ ಮಾಡಲಾಗತ್ತದೆ. ಬಲವಂತದ ದುಡಿಮೆ, ಜೀತಪದ್ಧತಿಯ ನಿಷೇಧ, ಋಣಮುಕ್ತರಾಗಿಸಿದ್ದು ದಲಿತಸಮುದಾಯದವರನ್ನು ಒಂದು ಕಡೆ ಸಾಮಾಜಿಕವಾಗಿ ಅಭಿವೃದ್ಧಿಪಡಿಸುವ ಕೆಲಸವಾದರೂ, ಮತ್ತೊಂದು ಕಡೆಯಿಂದ ಆ ಸಂದರ್ಭದಲ್ಲಿದ್ದವರಿಗೆ ಸಾಕಷ್ಟು ರೀತಿಯಲ್ಲಿ ತೊಂದರೆಗಳನ್ನು ಎದುರಿಸಲು ಕಾರಣವಾಗುತ್ತದೆ. ದಲಿತಸಮುದಾಯದವರನ್ನೇ ನಂಬಿ ತಮ್ಮ ಮನೆಯ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದವರಿಗೆ 'ಇನ್ನು ಮುಂದೆ ನನ್ನ ಮನೆಯ ದನದ ಕೊಟ್ಟಿಗೆ ಕಸ ಎತ್ತುವವರು ಯಾರು? ನನ್ನ ತೋಟದಲ್ಲಿ ಕೆಲಸ ಮಾಡಿ ಕಾವಲು ಕಾಯುವವರು ಯಾರು? ಸರ್ಕಾರದ ಕಾನೂನಿನ ಪ್ರಕಾರ ನನಗೆ ಸೇರಿದ ಜಮೀನನ್ನು ಕೂಲಿ ಮಾಡುತ್ತಿದ್ದವನಿಗೆ ಬಿಟ್ಟುಕೊಡಬೇಕಲ್ಲ' ಎಂಬ ಕಾರಣದಿಂದ ಮಾನವೀಯತೆಯನ್ನು ಮರೆತು ಅವರ ಮೇಲೆ ನಾನಾ ರೀತಿಯ ದೌರ್ಜನ್ಯಗಳನ್ನು ಮಾಡಲು ಪ್ರಾರಂಭಿಸುತ್ತಾರೆ.

**ದಲಿತರ ಮೇಲೆ ದೌರ್ಜನ್ಯಗಳು ನಡೆಯಲು ಕಾರಣಗಳು**

ಗ್ರಾಮೀಣ ಭಾಗದಲ್ಲಿ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂದು ವಿಭಜಿಸಿಕೊಳ್ಳಲಾಗಿದ್ದು, ಅಲ್ಲಿ ಸ್ಪೃಶ್ಯರಿಗೆ ಕೆಲವೇ ಕರಾರುಗಳು ಅಸ್ಪೃಶ್ಯರಿಗೆ ಸಾಕಷ್ಟು ಕರಾರುಗಳನ್ನು ನ್ಯಾಯೋಚಿತವಲ್ಲದ ರೀತಿಯಲ್ಲಿ ರೂಪಿಸಲಾಗಿರುತ್ತದೆ. ಅವುಗಳನ್ನು ಪ್ರಮುಖವಾಗಿ ಈ ಕೆಳಕಂಡಂತೆ ಗುರುತಿಸಲಾಗಿದೆ.

1. "ಅಸ್ಪೃಶ್ಯರ ವಾಸವು ಹಳ್ಳಿಯ ದಕ್ಷಿಣದ ದಿಕ್ಕಿನಲ್ಲಿರಬೇಕು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅತ್ಯಂತ ಅಮಂಗಳವಾದದ್ದು ಎಂಬುದು ಬ್ರಾಹ್ಮಣರ ಹಾಗೂ ಸ್ಪೃಶ್ಯರ ಅನಿಸಿಕೆ.
2. ಅಸ್ಪೃಶ್ಯರ ಗುಂಪಿಗೆ ಸೇರಿದವರು ಭೂಮಿ, ಹಣ ಇತ್ಯಾದಿ ರೂಪದ ಸಂಪತ್ತನ್ನು ಪಡೆದುಕೊಳ್ಳುವಂತಿಲ್ಲ.
3. ಅಸ್ಪೃಶ್ಯರು ಹೆಂಚಿನ ಹೊದಿಕೆ ಹಾಗೂ ಆರ್.ಸಿ.ಸಿ. ಇರುವ ಮನೆಗಳನ್ನು ಕಟ್ಟಿಕೊಳ್ಳುವಂತಿಲ್ಲ.
4. ಅಸ್ಪೃಶ್ಯರು ಶುಭ್ರವಾದ ವಸ್ತ್ರಗಳನ್ನು ತೊಡುವುದು, ಪಾದರಕ್ಷೆಗಳನ್ನು ಹಾಕಿಕೊಳ್ಳುವುದು, ಗಡಿಯಾರ ಅಥವಾ ಚಿನ್ನದ ಆಭರಣಗಳಿಂದ ಅಲಂಕರಿಸಿಕೊಳ್ಳಕೂಡದು.
5. ಒಬ್ಬ ಸ್ಪೃಶ್ಯರ ಸಮ್ಮುಖದಲ್ಲಿ ಕುರ್ಚಿಯ ಮೇಲೆ ಕೂರಕೂಡದು.
6. ಅಸ್ಪೃಶ್ಯರು ಹಳ್ಳಿಯ ಮುಖಾಂತರ ಯಾವುದೇ ಮೆರವಣಿಗೆ ಹೋಗುವಂತಿಲ್ಲ.
7. ಸ್ಪೃಶ್ಯರಿಗೆ ತಲೆಬಾಗಿ ನಮಸ್ಕರಿಸಬೇಕು".[1]

ಈ ಮೇಲಿನ ಕರಾರುಗಳನ್ನು ಮೀರಿದ್ದಕ್ಕಾಗಿ ಸ್ಪೃಶ್ಯರು ಅಸ್ಪೃಶ್ಯರ ಮೇಲೆ ಹೆಚ್ಚಿನದಾಗಿ ದೌರ್ಜನ್ಯಗಳನ್ನು ಮಾಡುತ್ತಾರೆ. ಮಾನವಸಮಾಜದಲ್ಲಿ ಮನುಷ್ಯರು ಮನುಷ್ಯರನ್ನು ತಮ್ಮಂತೆಯೇ ಎಂದು ಭಾವಿಸಿ ನಡೆದುಕೊಳ್ಳದೆ ತಾವು ಶ್ರೇಷ್ಠ ಮತ್ತೊಬ್ಬರು ಕನಿಷ್ಠ, ಜಾತಿಯಿಂದ ತಮ್ಮದು ಹಿರಿತನದ ಜಾತಿ ಎಂಬ ಮನೋಭಾವಗಳು ಅವರ ಮೆದುಳಲ್ಲಿ ಗಟ್ಟಿಯಾಗಿ ನೆಲೆಯೂರಿರುವುದರಿಂದ ಅದನ್ನು ಸುಲಭವಾಗಿ ಈ ಅಸಮಾನತೆಯುಳ್ಳ ಸಮಾಜದಿಂದ ಕಿತ್ತೊಗೆಯಲು ಪ್ರಯತ್ನಿಸಿದ ಫಲವಾಗಿ ವಿವಿಧ ರೀತಿಯ ಸಾಮಾಜಿಕ ದೌರ್ಜನ್ಯಗಳು ನಡೆದವು.

1. ಮೂಲಭೂತ ಸೌಕರ್ಯಗಳಿಂದ ದಲಿತರನ್ನು ವಂಚಿತರನ್ನಾಗಿಸುವುದು.
2. ಕೂಲಿ ಕೆಲಸಕ್ಕೆ ಕರೆಯದೆ ಇರುವುದು.
3. ಹೋಟೆಲ್‌ಗಳಲ್ಲಿ ಕಾಫಿ, ಟೀ, ಊಟ, ತಿಂಡಿ ನೀಡುವುದಕ್ಕೆ ವಿರೋಧಿಸುವುದು.
4. ದೇವಸ್ಥಾನಗಳಲ್ಲಿ ಪೂಜೆಯನ್ನು ನೀಡಲು ನಿರಾಕರಿಸುವುದು.
5. ಹಬ್ಬದ ಉತ್ಸವಗಳಲ್ಲಿ ಭಾಗಿಯಾಗಲು ಅವಕಾಶ ನೀಡದೆ ಇರುವುದು.
6. ಅಂಗಡಿಗಳಲ್ಲಿ ದಿನಸಿ ಪದಾರ್ಥಗಳನ್ನು ನೀಡಲು ನಿರಾಕರಿಸುವುದು.
7. ದಲಿತೇತರ ವರ್ಗದವರು ದಲಿತವರ್ಗದ ಕೂಲಿಕಾರರನ್ನು ದರ್ಪದ ಮಾತುಗಳಿಂದ ಏಕವಚನದಲ್ಲಿ ಕರೆಯುವುದು.
8. ದಲಿತ ಸ್ತ್ರೀಯರನ್ನು ಲೈಂಗಿಕ ಮನೋಭಾವದಿಂದ ಮಾತನಾಡಿಸುವುದು(ಅವರಿಗೆ ಯಾರು ಸಹಾಯ ಮಾಡುವುದಿಲ್ಲ ಎಂಬ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ತಮ್ಮ ದೈಹಿಕ ಸುಖದ ಲಾಭವನ್ನು ಪಡೆಯುವುದು).

ಈ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ಸಾಕಷ್ಟು ಪ್ರಕರಣಗಳು ನಡೆದಿವೆ. ಅದರಲ್ಲಿ ಮುಖ್ಯವಾಗಿ ಮೈಸೂರು, ಮಂಡ್ಯ, ಚಾಮರಾಜನಗರ ಘಟನೆಗಳನ್ನು ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ. ಮೈಸೂರು ಜಿಲ್ಲೆಯ 7 ತಾಲೂಕುಗಳಲ್ಲೂ ಕ್ಷುಲ್ಲಕ ಕಾರಣಗಳಿಗಾಗಿ ದಲಿತರ ಮೇಲೆ ಸಾಮಾಜಿಕ ದೌರ್ಜನ್ಯ ನಡೆದಿದೆ.

ಅಸ್ಪೃಶ್ಯತಾಚರಣೆ ಮಾಡುವುದರ ಜೊತೆಗೆ ಕಾಲಿಗೆ ಚಪ್ಪಲಿ ಧರಿಸಿ ನಡೆಯುವ ಕಾರಣಕ್ಕೆ, ಕೊಡೆ ಹಿಡಿದು ನಡೆದದ್ದು, ಉತ್ತಮ ಉಡುಪುಗಳನ್ನು ಧರಿಸಿ ಕಾರಣಕ್ಕೆ, ಆಭರಣಗಳನ್ನು ಧರಿಸಿದ್ದಕ್ಕೆ, ಸೈಕಲ್ ಸವಾರಿ ಮಾಡಿದ್ದಕ್ಕೆ, ಪಂಚೆಯನ್ನು ಮಂಡಿಯ ಮೇಲಕ್ಕೆ ಕಟ್ಟಿದ್ದಕ್ಕೆ ದೌರ್ಜನ್ಯಗಳ ನಡೆದಿವೆ.

1. ಮೈಸೂರು ತಾಲೂಕಿನ ಲಲಿತಾದ್ರಿಪುರಂನಲ್ಲಿ ಲಿಂಗಾಯತರೇ ಅಧಿಕವಾಗಿದ್ದರೂ ದಲಿತ ಸಮುದಾಯದವರು ಇವರ ಬೀದಿಯಲ್ಲಿ ಚಪ್ಪಲಿ ಧರಿಸಿ ನಡೆದಾಡುವಂತಿರಲಿಲ್ಲ. ನಡೆದಾಡಿದ ದಲಿತರಿಗೆ ಶಿಕ್ಷೆ ತಪ್ಪುತ್ತಿರಲಿಲ್ಲ. ಇದನ್ನು ಖಂಡಿಸಿ 1975ರ ಸಮಯದಲ್ಲಿ ದಲಿತನಾಯಕರು ಹೋರಾಟ ಮಾಡಿ ಈ ಆಚರಣೆಗಳನ್ನು ನಿಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

2. 1975, ಮೇ 27ರಲ್ಲಿ ಟಿ.ನರಸೀಪುರ ತಾಲೂಕಿನ ಕಲಿಯೂರು ಗ್ರಾಮದಲ್ಲಿ ಹರಿಜನರ ಮದುವೆ ಸಮಾರಂಭದಲ್ಲಿ ವಧು–ವರರಿಬ್ಬರು ಸವರ್ಣೀಯರ ಬೀದಿಯಲ್ಲಿ ಕೊಡೆ ಹಿಡಿದು ಚಪ್ಪಲಿ ಧರಿಸಿ ಹೋಗುತ್ತಿದ್ದರು. ಇದನ್ನು ಸಹಿಸದ ಸವರ್ಣೀಯರು ದಲಿತರ 9 ಗುಡಿಸಿಲು ಗಳಿಗೆ ಬೆಂಕಿ ಹಚ್ಚಿದ್ದರು.[2]

3. ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಹಳ್ಳದ ಕೊಪ್ಪಲು ಗ್ರಾಮದಲ್ಲಿ ಜೂನ್ 1978ರಲ್ಲಿ ಹರಿಜನ ಮಹಿಳೆಯಾದ ಬಸವಯ್ಯನ ಪತ್ನಿ ರಾಮಮ್ಮ ಎಂಬುವವರು ಸಾರ್ವಜನಿಕ ಬಾವಿಯಲ್ಲಿ ನೀರು ತರಲು ಹೋದಾಗ ಅಲ್ಲಿನ ಪಟೇಲನ ಮನೆಯವರು ಈಕೆಯನ್ನು ಮನಬಂದಂತೆ ಥಳಿಸಿದ್ದರು. ಇದೇ ತಾಲೂಕಿನ ಚಿಕ್ಕ ಅಡಗನಹಳ್ಳಿ ಗ್ರಾಮದಲ್ಲಿ ಸತ್ತ ದನವನ್ನು ಹೊರುವುದನ್ನು, ಸತ್ತ ನಾಯಿ ಎಳೆಯುವುದನ್ನು, ತಮಟೆ ಬಾರಿಸುವುದನ್ನು, ದಲಿತರು ತಿರಸ್ಕರಿಸಿದ್ದರಿಂದ ಅಲ್ಲಿನ ಸವರ್ಣೀಯರು ಸಾಮಾಜಿಕ ಬಹಿಷ್ಕಾರವನ್ನು ಹಾಕಿದ್ದರು.[3]

4. ದಿನಾಂಕ 8–11–1978 ರಂದು ಕೆ.ಆರ್.ನಗರದ ಬಳಿಯ ಹೊಸಹಳ್ಳಿಯಲ್ಲಿ ದಲಿತ ಲಕ್ಷ್ಮಯ್ಯ ಎಂಬುವನನ್ನು ಅದೇ ಊರಿನ ಒಕ್ಕಲಿಗರು ಕೊಲೆ ಮಾಡಿದರು. ಈ ಕೊಲೆಗೆ ಪ್ರೇಮ ಪ್ರಕರಣವೇ ಕಾರಣವಾಗಿದೆ. ಲಕ್ಷ್ಮಯ್ಯ ಸಿದ್ದೇಗೌಡರ ಮಗಳಾದ ಮಾದೇವಿಯನ್ನು ಪ್ರೇಮಿಸುತ್ತಿದ್ದನು. ಇದನ್ನು ಒಕ್ಕಲಿಗರು ಸಹಿಸದಾದರು. ಈತನು ತನ್ನ ಸಂಗಡಿಗರೊಂದಿಗೆ ಕೆ.ಆರ್.ನಗರಕ್ಕೆ ಹೋಗಿ ಸಿನಿಮಾ ನೋಡಿ ಹಿಂತಿರುಗುತ್ತಿದ್ದಾಗ, ಮಾದೇವಿಯ ಅಣ್ಣಂದಿರಾದ ವೆಂಕಟೇಶ, ಪಾಪಣ್ಣ, ಚಿನ್ನಣ್ಣ, ರಾಮಚಂದ್ರೇಗೌಡ ಮತ್ತು ಸ್ವಾಮೇಗೌಡ ಲಕ್ಷಯ್ಯನ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದರು. ಕೆ.ಆರ್.ನಗರದಲ್ಲಿ ಇದಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸಲಾಯಿತು.[4]

5. ಹದಿನಾರು ಗ್ರಾಮವು ಮೈಸೂರು ಜಿಲ್ಲೆಯಿಂದ 26 ಕಿಲೋಮೀಟರ್ ಮತ್ತು ನಂಜನಗೂಡು ತಾಲೂಕು ಕೇಂದ್ರದಿಂದ 10 ಕಿಲೋಮೀಟರ್ ಅಂತರದಲ್ಲಿದೆ. ಇದು ಮೈಸೂರು ಒಡೆಯರ ಮೂಲ ಸ್ಥಳವೆಂದು ಹೇಳಲಾಗುತ್ತದೆ. ಈ ಗ್ರಾಮದಲ್ಲಿ ಒಟ್ಟು 8,000 ಜನಸಂಖ್ಯೆ ಇದ್ದು ಲಿಂಗಾಯತ ಸಮುದಾಯದ 800 ಮನೆಗಳು, ನಾಯಕಸಮುದಾಯದ 200 ಮನೆಗಳು, ಹೊಲೆಯಸಮುದಾಯದ 150 ಮನೆಗಳು, ಕುರುಬಸಮುದಾಯದ 20 ಮನೆಗಳು ಇತರೆ ಜಾತಿಗಳ 50 ಮನೆಗಳು ಕಂಡುಬರುತ್ತವೆ.

ಈ ಗ್ರಾಮವು ಸಮೃದ್ಧತೆಯಿಂದ ಕೂಡಿದೆ. 1975ರಲ್ಲಿ ದಲಿತರೆಲ್ಲರೂ ಒಗ್ಗಟ್ಟಾಗುತ್ತಿದ್ದಾರೆ ಎಂಬ ಕಾರಣದಿಂದ ದಲಿತಸಮುದಾಯದವರನ್ನು ಬಹಿಷ್ಕರಿಸಲಾಗಿತ್ತು. ಅಂದರೆ ಅಂಗಡಿಗಳಲ್ಲಿ ದಿನಸಿ ಕೊಡುವುದನ್ನು ನಿಷೇಧಿಸಿದ್ದರು, ಕೂಲಿ ಕೆಲಸಗಳಿಗೆ ಕರೆಯಬಾರದು ಎಂಬುದಾಗಿ ತಮ್ಮಯ್ಯಪ್ಪನವರ ನಾಯಕತ್ವದಲ್ಲಿ ತೀರ್ಮಾನಿಸಿದ್ದರು. ಇದರಿಂದ ನಮಗೆ ತೊಂದರೆಯಾಗುತ್ತದೆ ಎಂಬುದಾಗಿ ಹೊಲೆಯ ಸಮುದಾಯದವರು ಒಗ್ಗಟ್ಟಾಗಿ ನಾಡಕಚೇರಿಗೆ ಬಂದು ಅರ್ಜಿಯನ್ನು ನೀಡುತ್ತಾರೆ. ಇದರಿಂದ ಒಂದೇ ದಿನದಲ್ಲಿ ಬಹಿಷ್ಕಾರವನ್ನು ತೆಗೆಯುವಂತೆ ಮಾಡಲಾಗಿತ್ತು.[5]

6. 1991ರಲ್ಲಿ ಹೆಗ್ಗಡದೇವನ ಕೋಟೆಯ ಸರಗೂರಿನ ದಲಿತರು ದೇವಾಲಯ ಪ್ರವೇಶ ಕೇಳಿದ್ದರಿಂದ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದರು. ಹಸಿರು ಪರಿಸರ ಹೊಂದಿರುವ ಹೆಗ್ಗಡದೇವನಕೋಟೆಯ ಸರಗೂರು ಗ್ರಾಮದಲ್ಲಿ 35ದಲಿತ ಕುಟುಂಬಗಳು, 65ಹಿಂದುಳಿದ ವರ್ಗಗಳ ಕುಟುಂಬಗಳು, 94 ಒಕ್ಕಲಿಗ ಹಾಗೂ 46 ಲಿಂಗಾಯತ ಕುಟುಂಬಗಳಿದ್ದವು. ಗ್ರಾಮದ ದಲಿತರು ಮೇಲ್ಜಾತಿಯ ಕುಟುಂಬಗಳನ್ನೇ ಕೂಲಿಗಾಗಿ ಅವಲಂಬಿಸಿದ್ದರು. ಗ್ರಾಮದ ಬಲಾಢ್ಯ ಜಾತಿಗಳಾದ ಒಕ್ಕಲಿಗರು, ಕುರುಬರಿಗೆ ಸುಮಾರು 122 ಎಕರೆ ಜಮೀನು ಇದ್ದು, ದಲಿತರಿಗೆ ಭೂಮಿ ಇರಲಿಲ್ಲ. ನಂತರ ಸರ್ಕಾರದ ಯೋಜನೆಗಳಿಂದ ಅಲ್ಪಸ್ವಲ್ಪ ಭೂಮಿ ಸಿಕ್ಕಿದರೂ ಅದು 35 ಕುಟುಂಬಗಳ ಪೈಕಿ ಕೇವಲ 16 ಕುಟುಂಬಗಳಿಗೆ ತಲಾ 2ರಿಂದ 3 ಎಕರೆ ಜಮೀನು ಲಭ್ಯವಾಯಿತು. ಅಷ್ಟರಲ್ಲೇ ದಲಿತರು ಒಣಭೂಮಿ ಬೇಸಾಯ ಮಾಡುತ್ತಿದ್ದರು. ಜೀವನ ನಿರ್ವಹಣೆಗಾಗಿ, ಕೂಲಿಗಾಗಿ, ಹೊಟ್ಟೆ ಬಟ್ಟೆಗಾಗಿ ಮೇಲ್ಜಾತಿಯ ಜಮೀನುಗಳನ್ನೇ ಆಶ್ರಯಿಸಿದ್ದರು.

ಊರಿನಲ್ಲಿರುವ ಸಿದ್ದೇಶ್ವರ ಹಾಗೂ ಆಂಜನೇಯ ದೇವಾಲಯದ ಜಾತ್ರೆಯ ವೇಳೆ ಪೂಜೆ ಸಲ್ಲಿಸಲು ದಲಿತರ ಎರಡು ಕುಟುಂಬಗಳು ದೇವಾಲಯ ಪ್ರವೇಶಿಸಿದ ಕಾರಣ ಮೇಲ್ಜಾತಿಯ ಜನರಿಂದ ಥಳಿತಕ್ಕೆ ಒಳಗಾಗಿ, ದಲಿತರಿಗೆ ಬುದ್ಧಿ ಕಲಿಸಬೇಕೆಂದು ಸಾಮಾಜಿಕ ಬಹಿಷ್ಕಾರ ಹಾಕಲಾಯಿತು. ಯಾರೂ ಸಹಾಯ ಮಾಡದಿದ್ದರಿಂದ, ಕೂಲಿಯನ್ನೂ ನೀಡದಿದ್ದರಿಂದ ಅತಂತ್ರವಾದ ದಲಿತಸಮುದಾಯ ಮೈಸೂರಿನ ಇತರೆ ಭಾಗಗಳಿಗೆ ಕೂಲಿಗಾಗಿ ವಲಸೆ ಹೋದರು. ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೆ ಪಂಚಾಯಿತಿ ಮಾಡಿ ಕಣ್ಣೀರಿನ ನಾಟಕ ಮಾಡಿ ಕೈತೊಳೆದುಕೊಂಡರು. ಆದರೆ ಸವರ್ಣೀಯರು ದಲಿತರ ಮೇಲಿನ 'ಸಾಮಾಜಿಕ ಬಹಿಷ್ಕಾರ'ವನ್ನು ಮಾತ್ರ ತೆರವುಗೊಳಿಸಲಿಲ್ಲ.[6]

7. ಮೈಸೂರು ಜಿಲ್ಲೆಯ ಕೂಡನಹಳ್ಳಿ ಗ್ರಾಮದಲ್ಲಿ ಲಿಂಗಾಯತ, ಅಗಸ, ಹೊಲೆಯ, ಶೆಟ್ಟಿ ಸಮುದಾಯಗಳಿವೆ. ಈ ಹಳ್ಳಿಯಲ್ಲಿ ಇಂದಿಗೂ ಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಹೊಲೆಯ ಸಮುದಾಯದವರು ಚಪ್ಪಲಿ ಧರಿಸಿ ಲಿಂಗಾಯತರ ಬೀದಿಯಲ್ಲಿ ತಿರುಗಾಡುವಂತಿಲ್ಲ. ಒಂದು ವೇಳೆ ಅದನ್ನು ಮೀರಿದರೆ ಅವರಿಗೆ ತೊಂದರೆಯಾಗುತ್ತದೆ ಎಂಬುದಾಗಿ ಬಿಂಬಿಸಲಾಗಿದೆ. ಇದನ್ನು ಗುರಿಯಾಗಿಟ್ಟುಕೊಂಡು 45 ವರ್ಷಗಳ ಹಿಂದೆ ನಮ್ಮ ಸಮುದಾಯದ ಜನಗಳಿಗೆ ಮನಬಂದಂತೆ ಥಳಿಸಿದ್ದರು. ಅ ಸಂದರ್ಭದಲ್ಲಿ ಭಯದಿಂದ ಬದುಕುವ ಪರಿಸ್ಥಿತಿ ನಮ್ಮದಾಗಿತ್ತು ಎಂಬುದಾಗಿ ಸ್ಥಳೀಯರಾದ ಮೂಗಯ್ಯನವರು ತಿಳಿಸಿದರು.[7]

8. **ಮೈಸೂರು ಜಿಲ್ಲೆ ಕೆ.ಆರ್.ನಗರ ಸಾಲಿಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರ 2010:** ಕೆ.ಆರ್.ನಗರ ತಾಲೂಕು ಸಾಲಿಗ್ರಾಮದಲ್ಲಿ ಸವರ್ಣೀಯರು ಮತ್ತು ಪರಿಶಿಷ್ಟ ಜನಾಂಗದವರ ನಡುವಿನ ವೈಷಮ್ಯದಲ್ಲಿ ಸವರ್ಣೀಯರು ಪರಿಶಿಷ್ಟ ಜನಾಂಗದ ಗೋವಿಂದರಾಜು ಬಿನ್ ಚೆಲುವಯ್ಯ ಎಂಬುವವರಿಗೆ ಹಲ್ಲೆ ಮಾಡಿದ್ದು. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಮೊ.ಸಂ. 158/10 ಕಲಂ, 143, 323, 448, 506 ರೆ/ವಿ 149 ಐಪಿಸಿ ಮತ್ತು 3 ಕ್ಲಾಸ್ (1) (10) ಎಸ್ಸಿ/ ಎಸ್‌ಟಿ ಕಾಯ್ದೆ 1989 ದಾಖಲಾಗಿದೆ.

ಈ ಬಗ್ಗೆ ಹಲ್ಲೆಗೊಳಗಾದ ಶ್ರೀ ಗೋವಿಂದರಾಜು ಅವರನ್ನು ದಿನಾಂಕ: 4.10.2010 ರಂದು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆಯಲಾಗಿ, ಸದರಿಯವರು ಸಾಲಿಗ್ರಾಮ ಗ್ರಾಮಪಂಚಾಯ್ತಿಯ ಸದಸ್ಯರಾಗಿರುತ್ತಾರೆ. ಇವರು ಸುಮಾರು 40ದಿನಗಳ ಹಿಂದೆ ಹೊನ್ನೇನಹಳ್ಳಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಪರಿಶಿಷ್ಟ ಜನಾಂಗದವರ ರಸ್ತೆಯ ಬದಿಯಲ್ಲಿರುವ ತೊಗರಿ ಗಿಡಗಳನ್ನು ಸವರ್ಣೀಯರ ದನಕರುಗಳು ಮೇಯುತ್ತಿದ್ದವು. ಈ ಬಗ್ಗೆ ದನ ಕಾಯುತ್ತಿದ್ದ ರತ್ನಮ್ಮ ಅವರಿಗೆ ಸರಿಯಾಗಿ ದನ ಹೊಡೆದುಕೊಂಡು ಹೋಗಲು ಹೇಳಿದಾಗ ಆ ಹೆಂಗಸು ಏಕಾಏಕಿ ಜಾತಿ ಹೆಸರು ಹಿಡಿದು ಬೈದರು. ಈ ಬಗ್ಗೆ ಎರಡು ಕಡೆಯವರಿಗೆ ಮಾತು ಬೆಳೆದು ಆ ಸಮಯದಲ್ಲಿ ರತ್ನಮ್ಮನವರು ಅವರ ಜನಾಂಗದ ರಾಮೇಗೌಡ, ಕಿರಣ, ಶೋಭ ಅವರನ್ನು ಕರೆಸಿ ಹೊಡೆಸಿದರು. ಈ ಸಮಯದಲ್ಲಿ ಸವರ್ಣೀಯ ಜನಾಂಗದ ಮುಖಂಡರಾದ ಜಯಣ್ಣನವರು ಸಮಾಧಾನ ಮಾಡಿ ಜಗಳ ಬಿಡಿಸಿಕೊಳ್ಳುತ್ತಾರೆ. ಆದರೆ ನಂತರ ಅದೇ ದಿನ ಸದರಿಯವರು ಗೋವಿಂದರಾಜು ಅವರ ಮನೆಗೆ ನುಗ್ಗಿ ಎಲ್ಲರನ್ನೂ ಹೊಡೆದಿರುತ್ತಾರೆ. ಆದ್ದರಿಂದ ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿ ಪ್ರಕರಣ ದಾಖಲಾಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ.

ಕುಮಾರ್ ಬಿನ್ ನಾಗಲಿಂಗಯ್ಯ ಪರಿಶಿಷ್ಟಜಾತಿ ಸಾಲಿಗ್ರಾಮ ಅವರನ್ನು 4.10.2010ರಂದು ವಿಚಾರಣೆ ಮಾಡಿ, ಹೇಳಿಕೆ ಪಡೆಯಲಾಗಿ ಮೇಲ್ಕಂಡ ಪ್ರಕರಣದಿಂದ ಒಕ್ಕಲಿಗ ಜನಾಂಗದವರ ಸಿನಿಮಾ ಟಾಕೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ದಲಿತರನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆ ಹಾಗೂ ಒಕ್ಕಲಿಗರ ಮನೆಯಲ್ಲಿ ಕೆಲಸ ಮಾಡುತ್ತಿದ್ದ, ಪುರಿಭಟ್ಟಿಯಲ್ಲಿ ಕೆಲಸ ಮಾಡುತ್ತಿದ್ದ, ಶಾಮಿಯಾನ, ಲೈಟಿಂಗ್ಸ್, ಜೆರಾಕ್ಸ್ ಅಂಗಡಿ, ಟೈಲರಿಂಗ್, ಡ್ರಾಮ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದ ದಲಿತರನ್ನು ಕೆಲಸದಿಂದ ತೆಗೆದುಹಾಕಿರುತ್ತಾರೆ. ಸಾಲಿಗ್ರಾಮದಲ್ಲಿನ ದಲಿತರಿಗೆ ಕೂಲಿ ಕೆಲಸಕ್ಕೆ ಕರೆಯದಂತೆ ಹಾಗೂ ಅಕ್ಕಪಕ್ಕದ ಗ್ರಾಮಗಳಲ್ಲಿಯೂ ಸಹ ಕೆಲಸಕ್ಕೆ ಕರೆಯದಂತೆ ತಾಕೀತು ಮಾಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ.

ಈ ಸಂಬಂಧ ಸವರ್ಣೀಯರು ಪರಿಶಿಷ್ಟ ಜಾತಿಯವರಿಗೆ ಬಹಿಷ್ಕಾರ ಹಾಕಿದ್ದಾರೆ ಎನ್ನುವ ಬಗ್ಗೆ ದಿನಾಂಕ 3.10.2010ರಂದು ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು, ಹುಣಸೂರು ಉಪವಿಭಾಗಾಧಿಕಾರಿಗಳು, ಕೆ.ಆರ್.ನಗರ ತಾಲೂಕು ಸಮಾಜಕಲ್ಯಾಣ ಅಧಿಕಾರಿ ಗಳೊಂದಿಗೆ ತಂಡವನ್ನು ರಚಿಸಿದ್ದು ವರದಿ ಪಡೆದು, ಪರಿಶಿಷ್ಟರಿಗೆ ಸರ್ಕಾರದ ಅಡಿಯಲ್ಲಿ ಸಲ್ಲಬೇಕಾದ ಕೂಲಿ ಕೆಲಸ ಹಾಗೂ ಇತರೆ ನಾಗರಿಕ ಸೌಲಭ್ಯಗಳನ್ನು ಒದಗಿಸುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು ನೀಡಿದ ಭರವಸೆ ಮೇರೆಗೆ ಸುಭಾಷ್ ಭರಣಿ ನಿವೃತ್ತ ಎಡಿಜಿಪಿ ಅವರು ಒಂದು ತಿಂಗಳ ಒಳಗೆ ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಿರುತ್ತಾರೆ.

ಈ ಬಗ್ಗೆ ಪೊಲೀಸ್ ಉಪಾಧೀಕ್ಷಕರು ಮೈಸೂರು ಗ್ರಾಮಾಂತರ ಉಪವಿಭಾಗದವರು ತನಿಖೆ ಕೈಗೊಂಡು ಸಾಲಿಗ್ರಾಮ ಪೊಲೀಸ್ ಠಾಣೆ ಮೊ.ಸಂ.158/10 ಪ್ರಕರಣದಲ್ಲಿ ದಿನಾಂಕ: 30.9.2010ರಂದು ಎಲ್ಲ ಆರೋಪಿಗಳನ್ನು ದಸ್ತಗಿರಿ ಮಾಡಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ಗ್ರಾಮದಲ್ಲಿ ಪರಿಶಿಷ್ಟ ಜನಾಂಗದವರು ಸುಮಾರು ನಾಲ್ಕು ಸಾವಿರ ಜನಸಂಖ್ಯೆ ಇದ್ದು, ಸವರ್ಣೀಯರು ಸಹ ಸುಮಾರು ಆರು ಸಾವಿರ ಜನಸಂಖ್ಯೆಯಲ್ಲಿದ್ದಾರೆ. ಸವರ್ಣೀಯರು ಪರಿಶಿಷ್ಟರು ಕೆಲಸ ಮಾಡುತ್ತಿದ್ದ ಫ್ಲೋರ್‌ಮಿಲ್, ಸಿನಿಮಾ ಟಾಕೀಸ್, ಪುರಿಭಟ್ಟಿಗಳಿಗೆ ಇನ್ನೂ ಸಹ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ವಿಷಯವು ತಿಳಿದುಬಂದಿದೆ. ಈ ಬಗ್ಗೆ ಸಮಾಜಕಲ್ಯಾಣ ಇಲಾಖೆಯ ವತಿಯಿಂದಾಗಲಿ ಅಥವಾ ಕಂದಾಯ ಇಲಾಖೆಯ ವತಿಯಿಂದಾಗಲಿ ಯಾವುದೇ ಪರಿಹಾರವು ದೊರೆತಿರುವುದಿಲ್ಲ ಹಾಗೂ ಸಾಲಿಗ್ರಾಮದ ಸುತ್ತಮುತ್ತ ಗ್ರಾಮಗಳಲ್ಲಿ ಸವರ್ಣೀಯರು ಪರಿಶಿಷ್ಟರಿಗೆ ಯಾವುದೇ ಬಹಿಷ್ಕಾರ ಹಾಕಿರುವುದಿಲ್ಲ ಎಂಬುದು ವಿಚಾರಣೆಯಿಂದ ತಿಳಿದುಬಂದಿರುತ್ತದೆ. ಆದರೆ ಸಾಲಿಗ್ರಾಮದ ಸವರ್ಣೀಯರು ಅಂದರೆ ಮುಖ್ಯವಾಗಿ ಒಕ್ಕಲಿಗಜನಾಂಗದವರು ಪರಿಶಿಷ್ಟರಿಗೆ ಬಹಿಷ್ಕಾರ ಹಾಕಿರುವುದು ತಿಳಿದುಬಂದಿರುತ್ತದೆ.[8]

9. **ಕೊಳ್ಳೇಗಾಲದ ತೇರಿನ ಹಬ್ಬದಲ್ಲಿ ಜಾತೀಯತೆ ವಿರುದ್ಧ ಹೋರಾಟ:** 1997ರ ವರೆಗೂ ಮೈಸೂರು ಜಿಲ್ಲೆಯ ತಾಲೂಕುಗಳಲ್ಲಿ ಒಂದಾಗಿದ್ದ ಈಗಿನ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ 1970ರ ದಶಕದಲ್ಲಿ ಅಲ್ಲಿನ ಲಕ್ಷ್ಮಿನಾರಾಯಣಸ್ವಾಮಿ ದೇವತೆಯ ಹೆಸರಿನಲ್ಲಿ ರಥೋತ್ಸವ ನಡೆದಿತ್ತು. ಈ ಸಂದರ್ಭದಲ್ಲಿ ದಲಿತರ ಮೇಲೆ ಆಚರಿಸಿದ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡಲಾಗಿತ್ತು. ಕೊಳ್ಳೇಗಾಲದಲ್ಲಿನ ಈ ರಥೋತ್ಸವದಲ್ಲಿ ಮೇಲ್ವರ್ಗದವರು ರಥದಲ್ಲಿದ್ದು, ದಲಿತವರ್ಗದ ಮುಖಂಡರನ್ನು ತಮ್ಮ ಜೊತೆ ಸೇರಿಸಿಕೊಳ್ಳದೆ ಮತೀಯತೆಯಿಂದ ಅವರನ್ನು ರಥ ಎಳೆಯುವಂತೆ ಆದೇಶಿಸಿದ್ದೇ ಈ ಘಟನೆಗೆ ಮುಖ್ಯ ಕಾರಣವಾಗಿತ್ತು. ಮೇಲ್ವರ್ಗದವರ ಈ ಮತೀಯ ನೀತಿಯನ್ನು ಪ್ರಶ್ನಿಸಿದ ಕೊಳ್ಳೇಗಾಲದ ಡಾ.ಅಂಬೇಡ್ಕರ್ ಸ್ಮಾರಕ ಸಂಘದ ವಿದ್ಯಾವಂತರು, ವಿಚಾರವಂತರು ನಿಮ್ಮವರ ಜೊತೆ ತೇರಿನಲ್ಲಿ ದಲಿತಮುಖಂಡರನ್ನು ಕರೆದುಕೊಳ್ಳಿ. ಇಲ್ಲ ಅಂಬೇಡ್ಕರ್ ಭಾವಚಿತ್ರವನ್ನು ಇರಿಸಿ. ಆಗ ನಾವು ತೇರನ್ನು ಎಳೆಯುತ್ತೇವೆ. ಇಲ್ಲದೆ ಹೋದರೆ ನಮ್ಮ ದಲಿತರ ಬೀದಿಗಳಲ್ಲಿ ಈ ತೇರಿನ ಹಬ್ಬಕ್ಕೆ ಬದಲಾಗಿ ಅಂಬೇಡ್ಕರ್ ಹಬ್ಬವನ್ನು ಆಚರಿಸಿಕೊಳ್ಳುತ್ತೇವೆಂದು ಹೇಳುವುದರ ಮೂಲಕ ಮೇಲ್ವರ್ಗದವರ ಸಂಪ್ರದಾಯವನ್ನು ತಿರಸ್ಕರಿಸಿದ್ದರು. ಇದನ್ನು ತಿರಸ್ಕರಿಸಿ ಪ್ರಶ್ನಿಸಿದವರಲ್ಲಿ ಮೈಸೂರಿನಲ್ಲಿ ಮಹಾರಾಣಿ ಕಾಲೇಜಿನಲ್ಲಿ ಉಪನ್ಯಾಸಕ ರಾಗಿದ್ದ ಪಿ.ಮಹಾದೇವು, ಹೂವಣ್ಣ, ಡಿ.ಸಿದ್ದರಾಜು, ರಾಜಣ್ಣ, ನಾಗಣ್ಣ, ಚೆನ್ನಪ್ಪ, ಚಂದ್ರಶೇಖರ್, ರಾಚಪ್ಪಾಜಿ, ಲಿಂಗಯ್ಯ, ಲಿಂಗರಾಜು, ಪಂಚಾಕ್ಷರಿ, ಶಿವಲಂಕಯ್ಯ, ಕೃಷ್ಣಸ್ವಾಮಿ, ದೊರೆರಾಜ್ ಮುಂತಾದವರು ಪ್ರಮುಖರು.[9]

10. **ಮಾಡ್ರಹಳ್ಳಿಯಲ್ಲಿ ದಲಿತರಿಗೆ ಬಹಿಷ್ಕಾರ, ಧರಣಿ:** ಗುಂಡ್ಲುಪೇಟೆ ತಾಲೂಕಿನ ಮಾಡ್ರಹಳ್ಳಿ ಗ್ರಾಮದಲ್ಲಿ ದಲಿತರಿಗೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆಂದು ಆರೋಪಿಸಿ ದಲಿತ ಸಂಘರ್ಷ ಸಮಿತಿಯು ತಾಲೂಕು ಕಚೇರಿ ಎದುರು ಸಾಂಕೇತಿಕ ಧರಣಿ ನಡೆಸಿ. ಜಿಲ್ಲಾ ದಲಿತ ಸಂಘರ್ಷ

ಸಮಿತಿ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ನೇತೃತ್ವದಲ್ಲಿ ಜಮಾಯಿಸಿದ ದಸಂಸದ ಕಾರ್ಯಕರ್ತರು ತಾಲೂಕು ಕಚೇರಿ ಎದುರು ಟೆಂಟ್ ಹಾಕಿ ಧರಣಿಗೆ ಚಾಲನೆ ನೀಡಿದರು.

ಗ್ರಾಮದಲ್ಲಿ ಸವರ್ಣೀಯರು ಬಹುಸಂಖ್ಯಾತರಾಗಿದ್ದು ಅಲ್ಪಸಂಖ್ಯಾತರಾಗಿರುವ ದಲಿತರಿಗೆ ಅಮಾನವೀಯ ಪದ್ಧತಿಯಾದ ಸಾಮಾಜಿಕ ಬಹಿಷ್ಕಾರ ಹಾಕಿ ಮಾನಸಿಕವಾಗಿ ದೌರ್ಜನ್ಯ ನಡೆಸಿದ್ದಾರೆ ಎಂದು ದೂರಿದ್ದಾರೆ. ಕೂಲಿಗೆ ಕರೆಯಬೇಡಿ, ಸಾಲ ನೀಡಬೇಡಿ ಎಂದು ಬಹಿಷ್ಕಾರ ಹಾಕಿದ್ದಾರೆ ಎಂದು ಜಿಲ್ಲಾಧಿಕಾರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಗ್ರಾಮದಲ್ಲಿ ಪ್ರತಿವರ್ಷ ನಡೆಸುತ್ತಿದ್ದ ಮಾರಮ್ಮನ ಜಾತ್ರೆ ಮಹೋತ್ಸವಕ್ಕೆ ದಲಿತರು ಭಾಗವಹಿಸಬಾರದು. ಬಹಿಷ್ಕಾರ ಹಾಕಿ ಏಕಮುಖವಾದ ನಿರ್ಧಾರ ಮಾಡಲಾಗಿದೆ. ಇದೆಲ್ಲದರ ಬಗ್ಗೆ ಕ್ರಮ ಜರುಗಿಸಲು ದೂರು ನೀಡಲಾಗಿದೆಯಾದರೂ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಲಾಗಿದೆ. ಪ್ರತಿಭಟನೆಯಲ್ಲಿ ತಾಲೂಕು ದಸಂಸ ಸಂಚಾಲಕರಾದ ನಂಜುಂಡಸ್ವಾಮಿ, ರಂಗಸ್ವಾಮಿ, ಎಸ್.ಜಿ.ಶ್ರೀನಿವಾಸ್, ಆರೇಪುರ ಸತೀಶ್, ಆರ್.ನೀಲಾಂಬಕೆ, ತೊಂಡವಾಡಿ ಶಿವಣ್ಣ ಸೇರಿದಂತೆ ಐವತ್ತಕ್ಕೂ ಹೆಚ್ಚು ಜನರಿದ್ದರು.[10]

11. **ದಲಿತರ ಮೇಲೆ ದೌರ್ಜನ್ಯ ಆರೋಪ:** ಗುಂಡ್ಲುಪೇಟೆ ತಾಲೂಕಿನ ಬೆಳವಾಡಿ ಗ್ರಾಮದಲ್ಲಿ ಸವರ್ಣೀಯರು ದಲಿತರು ಬೆಳೆದಿದ್ದ ಬೆಳೆಯನ್ನು ನಾಶಪಡಿಸಿದ್ದಾರೆ. ಇದಲ್ಲದೆ ದಲಿತರ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ. ಹೀಗಿದ್ದರೂಸಂಬಂಧಪಟ್ಟವರು ಕ್ರಮ ಕೈಗೊಂಡಿಲ್ಲ ಎಂದು ದಲಿತ ಸಂಘರ್ಷ ಸಮಿತಿ ಆರೋಪಿಸಿದೆ. ದಲಿತ ಜನಾಂಗದವರೊಬ್ಬರ ಅಂತ್ಯಸಂಸ್ಕಾರ ನಡೆಯುತ್ತಿದ್ದ ಸಂದರ್ಭದಲ್ಲಿ ಸವರ್ಣೀಯರ ಗುಂಪೊಂದು ದೌರ್ಜನ್ಯ ನಡೆಸಿದೆ. ಸರಕಾರಿ ಕೆರೆಯಲ್ಲಿ ಬಹುಪಾಲು ಭೂಮಿಯನ್ನು ಸವರ್ಣೀಯರು ಅತಿಕ್ರಮಿಸಿಕೊಂಡಿದ್ದಾರೆ. ಆದರೆ ಇದೇ ಕೆರೆಯಲ್ಲಿ ಭೂರಹಿತ ದಲಿತರು ಬಿತ್ತನೆ ಮಾಡಿದ್ದ ಬೆಳೆಯನ್ನು ಸಂಪೂರ್ಣ ನಾಶಪಡಿಸಲಾಗಿದೆ. ದಲಿತರಿಗೆ ಪೂಜೆ ನಿರಾಕರಿಸಿದ ಹಿನ್ನೆಲೆಯಲ್ಲಿ ಮೊಕದ್ದಮೆ ದಾಖಲಾಗಿದೆ. ಆ ಪ್ರಕರಣದ ಸೇಡನ್ನು ಈ ರೀತಿಯಾಗಿ ತೀರಿಸಿಕೊಳ್ಳಲು ಸವರ್ಣೀಯ ಗುಂಪೊಂದು ಇಂಥ ದೌರ್ಜನ್ಯದಲ್ಲಿ ತೊಡಗಿದೆ. ಹೀಗಾಗಿ ಬೆಳವಾಡಿ ಗ್ರಾಮದ ದಲಿತರು ಭಯಭೀತರಾಗಿದ್ದಾರೆ. ಆದ್ದರಿಂದ ಪೊಲೀಸ್ ಇಲಾಖೆ ಹಿರಿಯ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಮಿತಿಯ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಳ್ಳಿ, ಸಂಘಟನಾ ಸಂಚಾಲಕ ಜಿ.ಶ್ರೀನಿವಾಸ್, ತಾಲೂಕು ಸಂಚಾಲಕ ರಂಗಸ್ವಾಮಿ ಆಗ್ರಹಿಸಿದ್ದಾರೆ.[11]

12. **ಆಡಳಿತ ವ್ಯವಸ್ಥೆ ನಿಷ್ಕ್ರಿಯದಿಂದ ಸಾಮಾಜಿಕ ಬಹಿಷ್ಕಾರ ದಸಂಸ ಆರೋಪ:** ಗುಂಡ್ಲುಪೇಟೆ (ಸೆಪ್ಟೆಂಬರ್ 10, ಸೋಮವಾರ) ತಾಲೂಕಿನ ಅಂಕಹಳ್ಳಿ ಗ್ರಾಮದ 176 ದಲಿತ ಕುಟುಂಬಗಳ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿರುವ ಬೆನ್ನಲ್ಲೇ ದಲಿತ ಕೋಮಿನ ಎರಡು ಮನೆಗಳ ಮೇಲೆ ಬೆಂಕಿ ಹಾಕಿದ್ದು ಆತಂಕ ಮೂಡಿಸಿತು. ಇದಕ್ಕೆ ತಾಲೂಕಿನ ಆಡಳಿತ ವ್ಯವಸ್ಥೆ ನಿಷ್ಕ್ರಿಯವಾಗಿರುವುದೇ ಕಾರಣ ಎಂದು ತಾಲೂಕು ದಲಿತ ಸಂಘರ್ಷ ಸಮಿತಿ ಆರೋಪಿಸಿದೆ. ಈ ಕುರಿತು ಜಂಟಿ ಪತ್ರಿಕಾಹೇಳಿಕೆ ನೀಡಿರುವ ಪದಾಧಿಕಾರಿಗಳಾದ ಸುಭಾಷ್ ಮಾಡ್ರಹಳ್ಳಿ, ಎಸ್.ಜಿ. ಶ್ರೀನಿವಾಸ್ ಹಾಗೂ ತಾಲೂಕು ಸಂಚಾಲಕರಾದ ನಂಜುಂಡಸ್ವಾಮಿ, ರಂಗಸ್ವಾಮಿ, ಬಸವರಾಜು, ಕೆಲ್ಲೇಪುರ, ದೇವು, ಬೆಳವಾಡಿ, ಹನುಮಂತರಾಜು, ಚಿಕ್ಕಣ್ಣ,

ಮುತ್ತಣ್ಣ, ಮಹದೇವರಾಜ್, ಶಂಕರ್, ಶಿವಪುರ ಅವರು ಶಿಂಡನಪುರ, ಸಿದ್ದಯ್ಯನಪುರ, ಬೆಳವಾಡಿ, ಹಸಗೂಲಿ, ಬೊಮ್ಮನಹಳ್ಳಿ, ಕಂದೇಗಾಲ, ಗೋಪಾಲಪುರ, ಹೊಂಗಳ್ಳಿ, ಮಾಡ್ರಹಳ್ಳಿ, ಇನ್ನಿತರ ಗ್ರಾಮಗಳಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದಿದ್ದು, ಇದು ಆತಂಕಕಾರಿ ಬೆಳವಣಿಗೆಯಾಗಿದ್ದು, ಇದು ನಿಲ್ಲಬೇಕೆಂದು ಒತ್ತಾಯಿಸಿದ್ದಾರೆ. ಅಲ್ಲದೆ ಸಾಮಾಜಿಕ ಬಹಿಷ್ಕಾರಕ್ಕೆ ಕಾರಣವಾದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.[12]

13. **ನಿವೇಶನದ ವಿಷಯವಾಗಿ ಸಾಮಾಜಿಕ ಬಹಿಷ್ಕಾರ**: ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಆತಗೂರು ಹೋಬಳಿಯ ನವಿಲೆ ಗ್ರಾಮದಲ್ಲಿ 1976ರಲ್ಲಿ ನಿವೇಶನದ ವಿಚಾರವಾಗಿ ಸಂಘರ್ಷವಾಗುತ್ತದೆ. ಗ್ರಾಮತಾಣದ ಸೈಟನ್ನು ಜೋಗಿನಾಥಯ್ಯ ಮತ್ತು ಕೆಂಪಮ್ಮ ದಂಪತಿ ಪಡೆದುಕೊಂಡಿರುತ್ತಾರೆ. ಆ ಸ್ಥಳವು ಆಳವಾದ ಗುಂಡಿಯನ್ನು ಹೊಂದಿರುವುದರಿಂದ ಆ ಸ್ಥಳವನ್ನು ಸಮತಟ್ಟಾಗಿಸಿ ಹೊಸ ಮನೆ ನಿರ್ಮಿಸಿಕೊಳ್ಳಲು ಸೂಕ್ತವಾಗುವಂತೆ ಶ್ರಮ ಹಾಕಿ ಸಿದ್ಧ ಮಾಡಿಕೊಂಡಿರುತ್ತಾರೆ. ಆದರೆ ಆ ನಿವೇಶನದ ಮೇಲೆ ಕಣ್ಣಿಟ್ಟಿದ್ದ ಗೂಳಿಗೌಡ ಬಿನ್ ಗೂಳಿಗೌಡ ಎಂಬ ವ್ಯಕ್ತಿಯು ಅದೇ ನಿವೇಶನ ಪಡೆಯಲು ಅರ್ಜಿಯನ್ನು ಹಾಕಿರುತ್ತಾನೆ. ಆದರೆ ಸರ್ಕಾರದ ನಿಯಮದಂತೆ ಆ ನಿವೇಶನವು ಜೋಗಿನಾಥಯ್ಯ ಅವರಿಗೆ "27.12.1379ರಂದು ತಾಲೂಕು ಅಭಿವೃದ್ಧಿ ಮಂಡಳಿ ಮದ್ದೂರು ಇವರು ನೀಡಿರುವ ದಾಖಲೆಗಳ ಪ್ರಕಾರ ಮಂಜೂರು ಆಗಿರುತ್ತದೆ." ಈ ಪ್ರಕ್ರಿಯೆಯಿಂದ ಅಸೂಯೆ ಪಟ್ಟುಕೊಂಡ ಗೂಳಿಗೌಡ ರಾಜಕೀಯ ವ್ಯಕ್ತಿಗಳ ಬೆಂಬಲದಿಂದ 21.4.1981ರಲ್ಲಿ ನವಿಲೆ ಪಂಚಾಯಿತಿ ಕಚೇರಿಯಲ್ಲಿ ಚೇರ್ಮನ್ ಹೊನ್ನೇಗೌಡರ ಅಧ್ಯಕ್ಷತೆಯಲ್ಲಿ ನವಿಲೆ ಹರಿಜನರಿಗೆ ಶ್ರೀರಾಮಮಂದಿರ ಇಲ್ಲದಿರುವುದರಿಂದ, ಹರಿಜನ ಕಲ್ಯಾಣಕ್ಕಾಗಿ ಹೊಸದಾಗಿ ರಾಮಮಂದಿರ ಬೇಕಾಗಿರುವ ಉದ್ದೇಶದಿಂದ ಮಂಜೂರು ಮಾಡಿಕೊಡಬೇಕೆಂದು ಚೇರ್ಮನ್ ಹೊನ್ನೇಗೌಡರ ಅಧ್ಯಕ್ಷತೆಯಲ್ಲಿ ತೀರ್ಮಾನಿಸಲಾಗುತ್ತದೆ. ಮುಂದುವರೆದು ಆ ಸ್ಥಳದಲ್ಲಿ ರಾಮಮಂದಿರ ಕಟ್ಟುವ ಉದ್ದೇಶದಿಂದ ಶಿಲಾನ್ಯಾಸವನ್ನು ನೆರವೇರಿಸಲು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಆಹ್ವಾನಿಸಿ ಶಿಲಾನ್ಯಾಸವನ್ನು ಮಾಡಲಾಗುತ್ತದೆ. ಶಿಲಾನ್ಯಾಸ ಮಾಡಿದ ಕಲ್ಲು ಇಂದಿಗೂ ಅಲ್ಲಿಯೇ ಇರುವುದು ಕಂಡುಬರುತ್ತದೆ. ಆದರೆ ದೃಢಚಿತ್ತದಿಂದ ಹೋರಾಟವನ್ನು ಮಾಡಿದ ಜೋಗಿನಾಥಯ್ಯನವರು ಗೂಳಿಗೌಡನ ರಾಜಕೀಯ ಆಟಗಳಿಗೆ ಕಾನೂನಿನ ನಿಯಮಗಳನ್ನು ಎಳೆದು ತಂದು ಆ ನಿವೇಶನವನ್ನು ತಮಗೆ ದೊರಕಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಪ್ರಜಾಪ್ರಭುತ್ವದ ಕಾನೂನಿನಲ್ಲಿ ಈ ದಲಿತಕುಟುಂಬ ನ್ಯಾಯ ಪಡೆದರೂ ಸಹ ಗ್ರಾಮದ ಅಲಿಖಿತ ಕಾನೂನಿನ ಸಾಮಾಜಿಕ ಕಟ್ಟಳೆಗಳ ಮುಂದೆ ಯಶಸ್ವಿಯಾಗಲು ಅವಕಾಶ ದೊರೆಯಲಿಲ್ಲ. ಅವರಿಗೆ ನಾನಾ ರೀತಿಯ ಸಂಕಷ್ಟಗಳನ್ನು ನೀಡಲಾಯಿತು. ಅವರ ಕುಟುಂಬಕ್ಕೆ ಯಾರು ಸಹಾಯ ಮಾಡದಂತೆ ನಿರ್ಬಂಧವನ್ನು ಹೇರಿದ್ದರು. ದಿನಸಿ ಅಂಗಡಿಗಳಲ್ಲಿ ಆಹಾರ ಪದಾರ್ಥ ಗಳನ್ನು ಕೊಡುತ್ತಿರಲಿಲ್ಲ, ಕೂಲಿ ಕೆಲಸಕ್ಕೆ ಕರೆಯುತ್ತಿರಲಿಲ್ಲ, ದೇವಸ್ಥಾನದಲ್ಲಿ ಪೂಜೆಯನ್ನು ನೀಡುತ್ತಿರಲಿಲ್ಲ. ಒಂದು ಬಾರಿ ದೇವಸ್ಥಾನಕ್ಕೆ ಹೋದಾಗ ಅವರ ಹಣ್ಣು, ಕಾಯಿಗಳನ್ನು ಪೂಜೆ ಸಾಮಾನುಗಳನ್ನು ಬೀದಿಗೆ ಎಸೆದು ಅಪಮಾನಿಸಿದ್ದರು. ರಾಮಮಂದಿರ ಕಟ್ಟಲು ಸಾಧ್ಯವಾಗದೇ ಇದ್ದುದಕ್ಕೆ ಒಕ್ಕಲಿಗ ಸಮುದಾಯದ ಕೆಲವರು ಒಂದು ಬಾರಿ ಹಲ್ಲೆ

ಮತ್ತು ಕೊಲೆ ಬೆದರಿಕೆಯನ್ನು ಹಾಕುತ್ತಾರೆ. ಇದರಿಂದಾಗಿ ತಮ್ಮ ಕುಟುಂಬದವರ ರಕ್ಷಣೆಗಾಗಿ ಜೋಗಿನಾಥಯ್ಯನವರು ಮಧ್ಯರಾತ್ರಿ ನವಿಲೆಯಿಂದ ಕೆಸ್ತೂರು ಪೋಲೀಸ್ ಠಾಣೆಯವರೆಗೆ ಕಾಲ್ನಡಿಗೆಯಲ್ಲಿಯೇ ಹೋಗಿ ದೂರನ್ನು ದಾಖಲಿಸಿದರು. ಹಾಗಾಗಿ ಸುಮಾರು 20ಕ್ಕೂ ಹೆಚ್ಚು ಪೋಲೀಸ್ ಇಲಾಖೆ ಸಿಬ್ಬಂದಿಗಳು ಜೋಗಿನಾಥಯ್ಯನವರ ಕುಟುಂಬಕ್ಕೆ ರಕ್ಷಣೆಯನ್ನು ನೀಡಿದರು. ಇದಾದ ಕೆಲವು ವರ್ಷಗಳ ನಂತರ ಜೋಗಿನಾಥಯ್ಯಅವರ ಗುಡಿಸಿಲಿಗೆ ಬೆಂಕಿಯನ್ನು ಹಚ್ಚಲಾಯಿತು.[13] ಹೀಗೆ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ದಲಿತರಿಗೆ ಸಿಗುತ್ತಿದ್ದ ಸೌಲಭ್ಯಗಳನ್ನು ಕಬಳಿಸಲು ಶೋಷಕಜನರು ಹಲವಾರು ರೀತಿಯ ಸಂಚುಗಳನ್ನು ರೂಪಿಸಿದ್ದರು. ಇದು ಒಂದು ಹಳ್ಳಿಯ ಮತ್ತು ಒಂದು ಕುಟುಂಬದ ರೋದನೆಯಲ್ಲ. ಜಾತಿ ವ್ಯವಸ್ಥೆಯಿಂದ ಕೂಡಿರುವ ಪ್ರತಿ ಹಳ್ಳಿಯಲ್ಲಿಯೂ ಹಲವಾರು ಕುಟುಂಬಗಳಲ್ಲಿ ನಡೆದಿರುವ ನೋವಿನ ಚರಿತ್ರೆಯಾಗಿದೆ. ಹಾಗಾಗಿ 'ರಾಜ ಮತ್ತು ರಾಜತ್ವದ ವಿವರಣೆ ಇತಿಹಾಸವಲ್ಲ ಶೋಷಿತರ ಯಾತನೆ ಚರಿತ್ರೆಯ ಭಾಗವೇ' ಎಂಬುದಾಗಿ ವ್ಯಾಖ್ಯಾನಿಸಲಾಗುತ್ತದೆ.

ಮಾನವರಿಗೆ ಮೂಲಭೂತವಾಗಿ ನೀರು, ಆಹಾರ, ಗಾಳಿ, ವಾಸಿಸುವ ಮನೆ ಇತ್ಯಾದಿ ಅವಶ್ಯಕತೆಗಳು ಅಗತ್ಯವಾಗಿ ಬೇಕಾಗಿರುತ್ತವೆ. ಇದು ಪ್ರಕೃತಿದತ್ತವಾಗಿ ಬಂದಿರುವ ಸೌಲಭ್ಯಗಳು. ಇವು ಮನುಷ್ಯರಿಗೆ ಸುಲಭವಾಗಿ ಸಿಗದಿದ್ದರೆ ಅವರು ಬದುಕನ್ನು ಕಟ್ಟಿಕೊಂಡು ಜೀವನ ಮಾಡಲು ಕಷ್ಟಸಾಧ್ಯವಾಗುತ್ತದೆ. ಗ್ರಾಮೀಣ ಭಾಗದ ಹಳ್ಳಿಗಳನ್ನು ಗುರುತಿಸುವುದಾದರೆ ಹಲವಾರು ಜಾತಿಯ ಜನರು ವಾಸ ಮಾಡುತ್ತಿರುತ್ತಾರೆ. ಉದಾಹರಣೆಗೆ ಹೊಲೆಯ, ಮಾದಿಗ, ಕುಂಬಾರ, ಒಕ್ಕಲಿಗ, ಲಿಂಗಾಯತ, ಬೆಸ್ತ, ಈಡಿಗ, ಗಾಣಿಗ, ಬ್ರಾಹ್ಮಣ, ಇತ್ಯಾದಿ. ಹೀಗೆ ಜಾತಿಗಳ ವ್ಯವಸ್ಥೆಯಿಂದ ಕೂಡಿದ ಹಳ್ಳಿಗಳಲ್ಲಿ ಸಾಮಾಜಿಕ ಏಣಿ–ಶ್ರೇಣಿ ವ್ಯವಸ್ಥೆಯಲ್ಲಿ ಉನ್ನತ ದರ್ಜೆಯ ವ್ಯಕ್ತಿಯೆಂದು ತಾವೇ ಕರೆದುಕೊಂಡಂತಹವರು ಕಾನೂನುಗಳನ್ನು ರೂಪಿಸುತ್ತಾರೆ. ಆ ಹಳ್ಳಿಯ ನೈರ್ಮಲ್ಯವನ್ನು ಕಾಪಾಡುವುದು, ತಮಟೆ ಬಾರಿಸುವುದು, ದೇವಸ್ಥಾನದ ಸ್ವಚ್ಛತೆ ಮತ್ತು ಹಬ್ಬದ ಸಂದರ್ಭದಲ್ಲಿ ಉತ್ಸವಕ್ಕೆ ಬೇಕಾಗುವ ಪೂರ್ವಸಿದ್ಧತೆಗಳನ್ನು ಮಾಡುವುದು, ಸಾವುಗಳು ಸಂಭವಿಸಿದಾಗ ಚಟ್ಟ ಕಟ್ಟುವುದು, ಹೆಣಗಳನ್ನು ಹೂಳುವುದಕ್ಕೆ ಗುಂಡಿ ತೆಗೆಯುವುದು, ಇನ್ನೂ ಅನೇಕ ರೀತಿಯ ಕೆಲಸಗಳನ್ನು ಮಾಡುವುದಕ್ಕೆ ದಲಿತರನ್ನು ಬಳಸಿಕೊಳ್ಳುತ್ತಿದ್ದರು. ಪ್ರಜಾಪ್ರಭುತ್ವ ಮಾದರಿಯ ಸಂವಿಧಾನದ ಅರಿವಿನಿಂದ ಕೆಲವರು ಅದನ್ನು ಪ್ರಶ್ನೆ ಮಾಡಲು ಪ್ರಾರಂಭಿಸಿದಾಗ ಯಾವುದಾದರೂ ಒಂದು ಸಮಸ್ಯೆ ಅವರನ್ನು ಸಿಲುಕಿಸಿ ಸಂದಿಗ್ಧ ಪರಿಸ್ಥಿತಿ ಎದುರಾಗುವಂತೆ ಮಾಡಿ ಸಾಮಾಜಿಕವಾಗಿ ಬಹಿಷ್ಕಾರಗಳನ್ನು ಹಾಕಿ ದೌರ್ಜನ್ಯವೆಸಗಿದ್ದಾರೆ. 1977ರ ಸಂದರ್ಭದಲ್ಲಿ ಬಹುತೇಕ ದಲಿತರಿಗೆ ವಾಸಿಸಲು ನಿವೇಶನಗಳು ಇಲ್ಲದಿರುವ ಸ್ಥಿತಿ ಸಣ್ಣ ನಿವೇಶನದ ಮನೆಗಳಲ್ಲಿ 8–10 ಸದಸ್ಯರಿರುವ ಕುಟುಂಬಗಳು ಕಿರಿದಾದ ಮನೆಗಳಲ್ಲಿ ವಾಸಿಸುತ್ತಿದ್ದರು. ಅದರಲ್ಲಿ ವಯಸ್ಸಾದ ತಂದೆ ತಾಯಿ, ಹೆಂಡತಿ ಮಕ್ಕಳು, ಅಣ್ಣ ತಮ್ಮ ಮತ್ತು ಅವರ ಹೆಂಡತಿಯರು ಹೀಗೆ ಇಷ್ಟು ಜನರನ್ನು ಒಳಗೊಂಡ ಕುಟುಂಬದಲ್ಲಿ ಬೆಳೆದುಬಂದ ಸಾಕಷ್ಟು ದಲಿತ ಸಮುದಾಯದ ಜನರು ಮೈಸೂರು, ಮಂಡ್ಯ, ಚಾಮರಾಜನಗರ ಭಾಗಗಳಲ್ಲಿದ್ದಾರೆ. ಇದನ್ನರಿತಿದ್ದ ರಾಜ್ಯಸರ್ಕಾರವು ದಲಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡುತ್ತದೆ. ಈ ನಿವೇಶನಗಳನ್ನು ಪಡೆಯುವ ವಿಚಾರವಾಗಿ ದಲಿತರು ಹಲವಾರು ಸಮಸ್ಯೆಗಳನ್ನು ಅನುಭವಿಸಿದ್ದಾರೆ.

**ಕೊನೆಟಿಪ್ಪಣಿಗಳು**

1. ಚಿನ್ನಸ್ವಾಮಿ ಸೋಸಲೆ ಎನ್, 2018, ದಲಿತರ ಬದುಕು–ಮೆಲುಕು, ಪು.56–57
2. ಗಣೇಶನ್ ಎಸ್., 1981, ದಲಿತರ ಮೇಲಿನ ದೌರ್ಜನ್ಯಗಳು, ಪು.6
3. ಗುರುಸ್ವಾಮಿ ಕೆ., ಕರ್ನಾಟಕದಲ್ಲಿ ದಲಿತ ಚಳವಳಿ ಮೈಸೂರು ಜಿಲ್ಲೆ ಒಂದು ಐತಿಹಾಸಿಕ ಅಧ್ಯಯನ, ಪು.148
4. ಚಿನ್ನಸ್ವಾಮಿ ಸೋಸಲೆ ಎನ್., 2018, ಪೂರ್ವೋಕ್ತ, ಪು.150
5. ಮಾದಯ್ಯನ ಮಗ ಮಾದಯ್ಯ, ಸಂದರ್ಶನದ ದಿನಾಂಕ 13.1.2023
6. ಮಾರುತಿ ಹೆಚ್., ಕರ್ನಾಟಕದ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರದ ಪರಿಣಾಮಗಳು 1971–2011, ಪು.132
7. ಮಾರುತಿ ಹೆಚ್., ಪೂರ್ವೋಕ್ತ, ಪು.142
8. ಪ್ರಜಾನುಡಿ ದಿನಪತ್ರಿಕೆ, ದಿನಾಂಕ 12.11.2007
9. ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ 29.10.2009
10. ಗುರುಸ್ವಾಮಿ ಕೆ, 2013, ದಲಿತ ಹೋರಾಟಗಾರ ನಾರಾಯಣ್, ಪು.16
11. ಮೈಸೂರುಮಿತ್ರ ದಿನಪತ್ರಿಕೆ, ದಿನಾಂಕ 11.09.2010
12. ಚಿನ್ನಸ್ವಾಮಿ ಸೋಸಲೆ ಎನ್, 2018, ಪೂರ್ವೋಕ್ತ, ಪು.161
13. ಕೆಂಪಮ್ಮ, ಸಂದರ್ಶನದ ಮಾಹಿತಿ 19.5.202

**ಪರಾಮಾರ್ಶನ ಗ್ರಂಥಗಳು**


- ಚಿನ್ನಸ್ವಾಮಿ ಸೋಸಲೆ, ಎನ್. (2013). *ದಲಿತಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು.* ಗೀತಾಂಜಲಿ ಪ್ರಕಾಶನ.
- ಚಿನ್ನಸ್ವಾಮಿ ಸೋಸಲೆ, ಎನ್. (2016). *ಕರ್ನಾಟಕದ ಸಮಗ್ರ ದಲಿತ ಚರಿತ್ರೆ.* ನವಕರ್ನಾಟಕ ಪಬ್ಲಿಕೇಷನ್ಸ್,
- ಗುರುಸ್ವಾಮಿ, ಕೆ. (2016). *ದಲಿತ ಹೋರಾಟಗಾರ ನಾರಾಯಣ್, ಹೋರಾಟದ ಬದುಕು ಮತ್ತು ತ್ಯಾಗದ ಬದುಕು.* ಕೆರಗೋಡು ಪ್ರಕಾಶನ.
- ಕುಶ್ವಂತ್ ಸಿಂಗ್. (2002). *ವೈ ಐ ಸಪೋರ್ಟೆಡ್ ದಿ ಎಮರ್ಜೆನ್ಸಿ: ಎಸ್ಸೇಂಸ್ ಆ್ಯಂಡ್ ಪ್ರೋಫೈಲ್.* ಪೆಂಗ್ವಿನ್ ಬುಕ್ಸ್ ಇನ್ ಇಂಡಿಯಾ.
- ಕೋಣಂದೂರು ವೆಂಕಟಪ್ಪಗೌಡ. (ಸಂ.). (1984). *ಪರಿವರ್ತನೆಯ ಹರಿಕಾರ ದೇವರಾಜ ಅರಸು.* ಯಶಸ್ವಿ ಪ್ರಕಾಶನ.